# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 341 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸುವ ದಿನಾಂಕ** | : | 21.12.2022 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು, ಮಲ್ಪೆ ಮತ್ತು ಕಾರವಾರ ಬಂದರುಗಳಲ್ಲಿನ ಹೂಳನ್ನು ನಿಯಮಿತವಾಗಿ ತೆಗೆಯಲಾಗುತ್ತಿದೆಯೇ ಅಥವಾ ಇಲ್ಲವೇ: ಹೂಳು ತೆಗೆದಿದ್ದಲ್ಲಿ ಯಾವಾಗ ತೆಗೆಯಲಾಗಿದೆ, ಹೂಳನ್ನು ತೆಗೆದಿಲ್ಲದಿದ್ದಲ್ಲಿ ಎಷ್ಟು ವರ್ಷಗಳಿಂದ ತೆಗೆದಿರುವುದಿಲ್ಲ; (ವಿವರ ನೀಡುವುದು) | ಮಂಗಳೂರು, ಮಲ್ಪೆ ಮತ್ತು ಕಾರವಾರ ಬಂದರುಗಳಲ್ಲಿ ನಿಯಮಿತವಾಗಿ ನಾವೆಗಳ ಸುಗಮ ಸಂಚಾರಕ್ಕೆ ಅಡಚಣೆ ಉಂಟಾಗುವ ಸಂದರ್ಭಗಳಲ್ಲಿ ಹೂಳನ್ನು ತೆಗೆಯಲಾಗುತ್ತದೆ.<br><br>**<u>ಕಾರವಾರ ಬಂದರು:</u>**<br>• ಕಾರವಾರ ಮೀನುಗಾರಿಕಾ ಬಂದರಿನಲ್ಲಿ 2009ನೇ ಸಾಲಿನಲ್ಲಿ ಹೂಳನ್ನು ಎತ್ತುವ ಕಾಮಗಾರಿಯನ್ನು ₹80.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗಿದೆ.<br>• ಕಾರವಾರ ವಾಣಿಜ್ಯ ಬಂದರಿನಲ್ಲಿ ಅಗತ್ಯತೆ ಹಾಗೂ ಅನುದಾನದ ಲಭ್ಯತೆ ಮೇರೆಗೆ ಸರಾಸರಿ 4-5 ವರ್ಷಕ್ಕೊಮ್ಮೆ ಹೂಳನ್ನು ತೆಗೆಯಲಾಗಿರುತ್ತದೆ.<br>• ಕಾರವಾರ ಬಂದರಿನ ವಾರ್ಫ್‌ನ ಮುಂಭಾಗ, ಟರ್ನಿಂಗ್ ಸರ್ಕಲ್, ನೌಕಾಯಾನ ಚಾನೆಲ್‌ಗಳಲ್ಲಿ ಹೂಳೆತ್ತುವ ಕಾಮಗಾರಿಯನ್ನು ₹31.00 ಕೋಟಿ ಅಂದಾಜು ಮೊತ್ತದಲ್ಲಿ 2017-18ನೇ ಸಾಲಿನಲ್ಲಿ ಕೈಗೊಳ್ಳಲಾಗಿರುತ್ತದೆ.<br>• ಪ್ರಸ್ತುತ ಸಾಲಿನಲ್ಲಿ ಹೂಳೆತ್ತಲು ₹40.00 ಕೋಟಿ ಮೊತ್ತದ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಇ-ಪ್ರೊಕ್ಯೂರಮೆಂಟ್‌ನಲ್ಲಿ ಟೆಂಡರ್ ಕರೆಯಲಾಗಿದ್ದು, ಬಿಡ್ ಸಲ್ಲಿಸಲು ಅಂತಿಮ ದಿನಾಂಕ: 28.12.2022 ಆಗಿರುತ್ತದೆ.<br><br>**ಮಂಗಳೂರು ಬಂದರು :**<br>• ಮಂಗಳೂರು ಹಳೇ ಮೀನುಗಾರಿಕಾ ಬಂದರಿನ ಅಳಿವೆ ಬಾಗಿಲು ಮತ್ತು ಕಂಡತ್‌ಪಳ್ಳಿ ಎಂಬಲ್ಲಿ ಹೂಳೆತ್ತುವ ಕಾಮಗಾರಿಯನ್ನು ₹441.05ಲಕ್ಷ ಮೊತ್ತದಲ್ಲಿ ಮೀನುಗಾರಿಕಾ ಇಲಾಖಾ ಅನುದಾನದಡಿ 2013-14ನೇ ಸಾಲಿನಲ್ಲಿ ಕೈಗೊಳ್ಳಲಾಗಿರುತ್ತದೆ.<br>• ಹಳೇ ಮಂಗಳೂರು ವಾಣಿಜ್ಯ ಬಂದರು ಧಕ್ಕೆ ಮುಂಭಾಗದಲ್ಲಿ ಹೂಳೆತ್ತುವ ಕಾಮಗಾರಿಯನ್ನು ₹100.00 ಲಕ್ಷ ಮೊತ್ತದಲ್ಲಿ ಬಂದರು ಇಲಾಖಾ ಅನುದಾನದಡಿ 2018-19ನೇ ಸಾಲಿನಲ್ಲಿ ಕೈಗೊಳ್ಳಲಾಗಿರುತ್ತದೆ.<br>• ಹಳೇ ಮಂಗಳೂರು ವಾಣಿಜ್ಯ ಬಂದರಿನ ಅಳಿವೆಯಲ್ಲಿ ಹೂಳೆತ್ತುವ ಕಾಮಗಾರಿಯನ್ನು ₹100.00 ಲಕ್ಷ ಮೊತ್ತದಲ್ಲಿ ಬಂದರು ಇಲಾಖಾ ಅನುದಾನದಡಿ 2021-22ನೇ ಸಾಲಿನಲ್ಲಿ ಕೈಗೊಳ್ಳಲಾಗಿರುತ್ತದೆ.<br>• ಹಳೇ ಮಂಗಳೂರು ವಾಣಿಜ್ಯ ಬಂದರಿನ ಬಿ.ಎಂ.ಡಿ ಫೆರಿಯಿಂದ ಬೆಂಗ್ರೆ (ಕಸಬಾ) ವರೆಗೆ ಹೂಳೆತ್ತುವ |

<table>
<tr>
<td></td>
<td></td>
<td>ಕಾಮಗಾರಿಯನ್ನು ₹95.00 ಲಕ್ಷ ಮೊತ್ತದಲ್ಲಿ ಬಂದರು ಇಲಾಖಾ ಅನುದಾನದಡಿ 2022-23ನೇ ಸಾಲಿನಲ್ಲಿ ಕೈಗೊಳ್ಳಲಾಗಿರುತ್ತದೆ.<br>
• ಸಾಗರಮಾಲಾ ಯೋಜನೆಯಡಿ ಹಳೇ ಮಂಗಳೂರು ವಾಣಿಜ್ಯ ಬಂದರಿನ ಬೇಂಗ್ರೆ ಬದಿಯಲ್ಲಿ ರೂ. 29.00 ಕೋಟಿ ಅಂದಾಜು ವೆಚ್ಚದಲ್ಲಿ ಹೂಳೆತ್ತುವ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ.<br>
ಮಲ್ಪೆ ಬಂದರು<br>
• ಉಡುಪಿ ಜಿಲ್ಲೆ ಉಡುಪಿ ತಾಲೂಕಿನ ಮಲ್ಪೆ ಮೀನುಗಾರಿಕಾ ಬಂದರಿಗೆ ಹೊಂದಿಕೊಂಡಿರುವ ಉದ್ಯಾವರ ನದಿಯಲ್ಲಿ ಸೇತುವೆವರೆಗೆ ಹೂಳೆತ್ತುವ ಕಾಮಗಾರಿಯನ್ನು ₹550.00 ಲಕ್ಷ ಮೊತ್ತದಲ್ಲಿ ಮೀನುಗಾರಿಕಾ ಇಲಾಖಾ ಅನುದಾನದಡಿ 2012-13ನೇ ಸಾಲಿನಲ್ಲಿ ಕೈಗೊಳ್ಳಲಾಗಿರುತ್ತದೆ.<br>
• ಉಡುಪಿ ಜಿಲ್ಲೆ ಮಲ್ಪೆ ಮೀನುಗಾರಿಕಾ ಬಂದರಿನ ಹೂಳೆತ್ತುವ ಕಾಮಗಾರಿಯನ್ನು ₹225.00 ಲಕ್ಷ ಮೊತ್ತದಲ್ಲಿ ಮೀನುಗಾರಿಕಾ ಇಲಾಖಾ ಅನುದಾನದಡಿ 2016-17ನೇ ಸಾಲಿನಲ್ಲಿ ಕೈಗೊಳ್ಳಲಾಗಿರುತ್ತದೆ.</td>
</tr>
<tr>
<td>ಆ)</td>
<td>ಕರ್ನಾಟಕ ರಾಜ್ಯದ ಬಂದರುಗಳಲ್ಲಿನ ಹೂಳನ್ನು ನಿಯಮಿತವಾಗಿ ತೆಗೆಯದಿರಲು ಕಾರಣಗಳೇನು; (ವಿವರ ನೀಡುವುದು)</td>
<td>ಕರ್ನಾಟಕ ರಾಜ್ಯದ ಬಂದರುಗಳಲ್ಲಿ ಅನುದಾನದ ಲಭ್ಯತೆ ಮೇರೆಗೆ ನಿಯಮಿತವಾಗಿ ಹೂಳನ್ನು ತೆಗೆಯಲಾಗಿರುತ್ತದೆ.</td>
</tr>
<tr>
<td>ಇ)</td>
<td>ಕಳೆದ ಮೂರು ವರ್ಷಗಳಿಂದ ಈ ಬಂದರುಗಳಲ್ಲಿ ಹೂಳಿನಲ್ಲಿ ಸಿಕ್ಕಿಹಾಕಿಕೊಂಡು ಪ್ರಾಣ ಹಾನಿಯಾದ ಪ್ರಕರಣಗಳಿವೆಯೇ; ಪ್ರಾಣ ಹಾನಿಯಾಗಿದ್ದಲ್ಲಿ ಯಾವ ಪ್ರದೇಶಗಳಲ್ಲಿ ಯಾವ ವರ್ಷಗಳಲ್ಲಿ ದುರ್ಘಟನೆ ಸಂಭವಿಸಿವೆ; ಪ್ರಾಣಹಾನಿಯಿಂದ ಪ್ರಕರಣಗಳಲ್ಲಿ ಸರ್ಕಾರದಿಂದ ಪರಿಹಾರ ನೀಡಲಾಗಿದೆಯೇ; ನೀಡಿದ್ದಲ್ಲಿ ಎಷ್ಟು ಪರಿಹಾರ ನೀಡಲಾಗಿದೆ; (ಬಂದರುವಾರು, ವರ್ಷವಾರು ಮತ್ತು ಪ್ರಕರಣವಾರು ವಿವರ ನೀಡುವುದು)</td>
<td>ರಾಜ್ಯದ ವಾಣಿಜ್ಯ ಬಂದರುಗಳಲ್ಲಿ ಹೂಳಿನಲ್ಲಿ ನಾವೆಗಳು ಸಿಕ್ಕಿಹಾಕಿಕೊಂಡ ಯಾವುದೇ ಘಟನೆಗಳು ನಡೆದಿರುವುದಿಲ್ಲ.<br>
ಕಳೆದ ಮೂರು ವರ್ಷಗಳಿಂದ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಬಂದರುಗಳಲ್ಲಿ ಹೂಳಿನಲ್ಲಿ ಸಿಕ್ಕಿಹಾಕಿಕೊಂಡು ಪ್ರಾಣ ಹಾನಿಯಾದ ಪ್ರಕರಣಗಳಿರುವುದಿಲ್ಲ. ಆದರೆ ಉಡುಪಿ ಜಿಲ್ಲೆ ಮಲ್ಪೆ ಬಂದರಿನಲ್ಲಿ ಪ್ರಕರಣ ವರದಿಯಾಗಿದ್ದು, ವಿವರ ಈ ಕೆಳಗಿನಂತಿದೆ:
<table>
<tr><th>ವರ್ಷ</th><th>ಉಡುಪಿ</th><th>ಪ್ರಕರಣಗಳ ಸಂಖ್ಯೆ</th><th>ಪರಿಹಾರ ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td>2019-20</td><td>ಮಲ್ಪೆ</td><td>02</td><td>6.00</td></tr>
<tr><td>2020-21</td><td>ಮಲ್ಪೆ</td><td>01</td><td>3.00</td></tr>
<tr><td>2021-22</td><td>--</td><td>--</td><td>--</td></tr>
<tr><td colspan="2">ಒಟ್ಟು</td><td>03</td><td>9.00</td></tr>
</table></td>
</tr>
<tr>
<td>ಈ)</td>
<td>ಪ್ರಸ್ತುತ ಮಂಗಳೂರು, ಮಲ್ಪೆ ಮತ್ತು ಕಾರವಾರ ಬಂದರುಗಳಲ್ಲಿ ಹೂಳೆತ್ತಲು ಏನು ಕ್ರಮವಹಿಸಲಾಗುತ್ತಿದೆ; ಈ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು)</td>
<td>ರಾಜ್ಯದ ಆಡಳಿತ ನಿಯಂತ್ರಣದಲ್ಲಿರುವ ಕಾರವಾರ ವಾಣಿಜ್ಯ ಬಂದರು ಮಾತ್ರ ನೈಸರ್ಗಿಕ ಸರ್ವ ಋತು ಬಂದರಾಗಿ ಕಾರ್ಯನಿರ್ವಹಿಸುತ್ತಿದ್ದು, ನೌಕಾಯಾನದ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಬಂದರಿನ ವಾರ್ಫ್‌ನ ಮುಂಭಾಗ, ಟರ್ನಿಂಗ್ ಸರ್ಕಲ್, ನೌಕಾಯಾನ ಚಾಲನ್‌ಗಳಲ್ಲಿ (-)8.50 ಮೀ. ಆಳದವರೆಗೆ ಹೂಳೆತ್ತಲು ಈಗಾಗಲೇ ₹40.00 ಕೋಟಿ ಮೊತ್ತದ ಟೆಂಡರ್‌ನ್ನು ಕರೆಯಲಾಗಿರುತ್ತದೆ.<br>
ಸಾಗರಮಾಲಾ ಯೋಜನೆಯಡಿ ಹಳೇ ಮಂಗಳೂರು ವಾಣಿಜ್ಯ ಬಂದರಿನ ಬೇಂಗ್ರೆ ಬದಿಯಲ್ಲಿ ರೂ. 29.00 ಕೋಟಿ ಅಂದಾಜು ವೆಚ್ಚದಲ್ಲಿ ಹೂಳೆತ್ತುವ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ.</td>
</tr>
</table>

| | | |
|---|---|---|
| | | ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಮೀನುಗಾರಿಕೆ ದೋಣಿಗಳು ಸುಗಮವಾಗಿ ಚಲಿಸಲು ಅನುಕೂಲವಾಗುವಂತೆ ನ್ಯಾವಿಗೇಷನ್ ಚಾನಲ್‌ಗಳಲ್ಲಿ ಹಂತಹಂತವಾಗಿ ಹೂಳೆತ್ತಲು ₹20.00 ಕೋಟಿ ಮೊತ್ತದ ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದು, ಈ ಕೆಳಗಿನ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.<br><br>1. ಕಾರವಾರ (ಬೈತಖೋಲ) ಮೀನುಗಾರಿಕಾ ಬಂದರಿನಲ್ಲಿ ಹೂಳೆತ್ತುವ ಕಾಮಗಾರಿಗೆ ₹350.00 ಲಕ್ಷಗಳ ಅಂದಾಜು ಪಟ್ಟಿಗೆ ಸರ್ಕಾರ ಅನುಮೋದನೆ ನೀಡಲಾಗಿದ್ದು ಕಾಮಗಾರಿಯ ಟೆಂಡರ್ ಪ್ರಕ್ರಿಯೆಯು ಜಾರಿಯಲ್ಲಿದೆ. ಸದ್ಯದಲ್ಲಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುವುದು.<br><br>2. ಮಂಗಳೂರು ಮೀನುಗಾರಿಕಾ ಬಂದರಿನಲ್ಲಿ ಜೆಟ್ಟಿ ಮುಂಭಾಗದಲ್ಲಿ ಹೂಳೆತ್ತುವ ಕಾಮಗಾರಿ - ಅಂದಾಜು ಮೊತ್ತ ₹390.00 ಲಕ್ಷ<br><br>3. ಉಡುಪಿ ತಾಲೂಕು ಮಲ್ಪೆ ಮೀನುಗಾರಿಕೆ ಬಂದರಿನ ಬೇಸಿನ್ ಮತ್ತು ನ್ಯಾವಿಗೇಷನ್ ಚಾನಲ್‌ನಲ್ಲಿ ಹೂಳೆತ್ತುವ ಕಾಮಗಾರಿ- ಅಂದಾಜು ಮೊತ್ತ ₹300.00 ಲಕ್ಷ |

**File No: IDD 152 PSP 2022**

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು.

ಮೀನುಗಾರಿಕಾ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು
ಕರ್ನಾಟಕ ಸರ್ಕಾರ